2018 ಕ.ತೀ.ವ 1693

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಮೆ: ಮಹೇಶ್ ಮತ್ತು ಅಸೋಸಿಯೇಟ್ಸ್ –ವಿರುದ್ಧ–

ಬಿ.ಕೆ. ಗರುಡಾಚಾರ್ (ಮೃತ), ಇವರ ಕಾನೂನುಸಮ್ಮತ ವಾರಸುದಾರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳ ಅಡಿಯಲ್ಲಿನ ರಿಟ್ ಅರ್ಜಿ

ವಿಚಾರಣೆಯ ಹಂತದಲ್ಲಿ ಪ್ರತಿವಾದಿಯು ತನ್ನ ಸಾಕ್ಷ್ಯವನ್ನು ನೀಡುವಾಗ ಹಾಜರುಪಡಿಸಿದ ದಸ್ತಾವೇಜುಗಳನ್ನು ದಾಖಲೆಗೆ ಸೇರಿಸಬಹುದೆಂಬುದರ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯವು ಹೊರಡಿಸಿದ ದಿನಾಂಕ: 22.02.2018ರ ಆದೇಶವನ್ನು ವಿರೋಧಿಸಿ, ರಿಟ್ ಅರ್ಜಿದಾರನು ಈ ನ್ಯಾಯಾಲಯದ ಮುಂದೆ ಬಂದಿದ್ದಾನೆ. ವಿಚಾರಣಾ ನ್ಯಾಯಾಲಯವು ಸದರಿ ದಸ್ತಾವೇಜುಗಳನ್ನು ತಿರಸ್ಕರಿಸಿತ್ತು.

ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯದಲ್ಲಿ, ವಿಚಾರಣಾ ನ್ಯಾಯಾಲಯವು ಪ್ರತ್ಯೇಕವಾಗಿ ಸಂಗತಿಗಳ ಆಕ್ಷೇಪಣೆಗಳನ್ನು ನಿರ್ಧರಿಸುವಲ್ಲಿ ಮತ್ತು ವಿಚಾರಣೆಯನ್ನು ಅವಲಂಬಿಸದೆ ವಿವಾದ ಕುರಿತು ನಿರ್ಣಯಗಳನ್ನು ನೀಡುವಲ್ಲಿ ತಪ್ಪೆಸಗಿದೆ. ದಸ್ತಾವೇಜುಗಳ ಒಳಾಂಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಪ್ರತಿವಾದಿಯು ಆರೋಪಿಸಿದಂತೆ, ಪಕ್ಷಕಾರರ ನಡತೆಗೆ ಸಂಬಂಧಿಸಿದಂತೆ ಅದು ಹೆಚ್ಚು ವಿವರವಾಗಿ ಕಾರ್ಯನಿರ್ವಹಿಸಬೇಕಾಗಿತ್ತು ಹಾಗೂ ಕಾನೂನಿಗೆ ಗೊತ್ತಿರುವ ರೀತಿಯಲ್ಲಿ ಸಾಕ್ಷ್ಯವನ್ನು ನೀಡಲು ಪಕ್ಷಕಾರರಿಗೆ ಅನುಮತಿ ನೀಡಿದ್ದರೆ ಮಾತ್ರ ಇದು ಸಾಧ್ಯವಾಗುತ್ತಿತ್ತು. ಎದ್ದುಕಾಣುವಂತೆಯೇ, ವಿಚಾರಣಾ ನ್ಯಾಯಾಲಯವು, ಮೂಲ ತತ್ವಗಳನ್ನಾಧರಿಸಿ ವಿಷಯವನ್ನು ನಿರ್ಣಯಿಸುವ ಕಾರ್ಯವನ್ನು ಕೈಗೆತ್ತಿಕೊಂಡ ಮಾರ್ಗವನ್ನು

*ರಿಟ್ ಅರ್ಜಿ ಸಂಖ್ಯೆ: 10712/2018 (ಜಿಎಮ್–ಸಿಪಿಸಿ), ದಿನಾಂಕ 26ನೇ ಏಪ್ರಿಲ್, 2018.

ಒಪ್ಪಲಾಗುವುದಿಲ್ಲ. ಈ ವಿಷಯವು, ವಿಚಾರಣಾ ನ್ಯಾಯಾಲಯವು ವಿವೇಚಿಸದೆ ಇರುವ ಸಂಗತಿಗಳ ನಿರ್ಣಯವನ್ನು ಒಳಗೊಂಡಿದೆ.

ವಿಚಾರಣಾ ನ್ಯಾಯಾಲಯವು ಅವಲಂಬಿಸಿದ ಮತ್ತು ಈ ನ್ಯಾಯಾಲಯದ ಮುಂದಿರುವ ತೀರ್ಪುಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟವಾಗಿ ನಿರೂಪಿಸಿದ ಮೊದಲ ತತ್ವಗಳೊಂದಿಗೆ ಯಾವುದೇ ಭಿನ್ನಾಭಿಪ್ರಾಯವಿರುವುದಿಲ್ಲ ಎಂಬುದನ್ನು ಹೇಳುವುದು ಅತ್ಯಗತ್ಯ. ವಿಚಾರಣಾ ನ್ಯಾಯಾಲಯವು ಸ್ವತಃ ಪರಿಹರಿಸಲು ವಿಫಲವಾಗಿರುವ ನಿರ್ಣಾಯಕ ಸಂಗತಿ ಎಂದರೆ, ಸದರಿ ತೀರ್ಪುಗಳು ಪ್ರಸ್ತುತ ಸಂದರ್ಭದ ಸಂಗತಿಗಳಿಗೆ ಮತ್ತು ಸಂದರ್ಭಗಳಿಗೆ ಅನ್ವಯವಾಗುವವೇ ಎಂಬುದಾಗಿದೆ. ವಿಚಾರಣಾ ನ್ಯಾಯಾಲಯವು, ವಾದಗಳ ಜೊತೆಯಲ್ಲಿ ಓದಿದ ದಸ್ತಾವೇಜುಗಳ ಒಳಾಂಶಗಳನ್ನು ವಿಶದಪಡಿಸದೆ ಯಾಂತ್ರಿಕವಾದ ರೀತಿಯಲ್ಲಿ ವಿಷಯವನ್ನು ಪರೀಕ್ಷಿಸಿದೆ. ದಸ್ತಾವೇಜುಗಳ ಒಳಾಂಶಗಳನ್ನು, ಪಕ್ಷಕಾರರು ನಿರೂಪಿಸಿದ ವಾದಗಳ ಮತ್ತು ಅವರ ನಡತೆ ಹಾಗೂ ಈ ಸಂಬಂಧದ ಕಾನೂನಿನ ಹಿನ್ನಲೆಯಲ್ಲಿ ಪರೀಕ್ಷಿಸಬೇಕಿತ್ತು. ಮೊದಲನಿಂದಲೇ, ಪ್ರತಿವಾದಿಯು, ದಿನಾಂಕ: 31.12.1979ರ ಒಪ್ಪಂದಕ್ಕೆ ಸಂಬಂಧಿಸಿದಂತೆ ನಿರಂತರವಾಗಿ ವಾದಿಸುತ್ತಾ ಬಂದಿದ್ದಾರೆ.

ಇದನ್ನು ವಿಶೇಷವಾಗಿ ಗುತ್ತಿಗೆ ಪಡೆದವರು ವಾದಿಸಿದ್ದರೂ, ದಿನಾಂಕ: 31.12.1979ರ ಒಪ್ಪಂದದ ನಿಬಂಧನೆಗಳ ಅನುಸಾರ ಬಾಡಿಗೆಗಳನ್ನು ಸಂದಾಯ ಮಾಡಲಾಗುತ್ತಿದೆ, ಅವರು ಈ ಸಂಗತಿಯ ಬಗ್ಗೆ ಇಲ್ಲಿ ಪರಿಗಣಿಸುವುದಿರಲಿ, ಚಕಾರ ಕೂಡ ಎತ್ತಿಲ್ಲ. ಆಕ್ಷೇಪಣೆಗಳನ್ನು ಕುರಿತು ಪರ್ಯಾಲೋಚಿಸಲಾಗಿದೆ ಮತ್ತು ಅದನ್ನು ಅತ್ಯಂತ ಯಾಂತ್ರಿಕವಾದ ರೀತಿಯಲ್ಲಿ ಪರ್ಯಾಲೋಚಿಸಲಾಗಿದೆ. ನ್ಯಾಯಾಲಯದ ಅಭಿಪ್ರಾಯದಲ್ಲಿ, ಇದು ನ್ಯಾಯಿಕ ಮಾರ್ಗವಲ್ಲ ಅಥವಾ ಇದು ನ್ಯಾಯೋದ್ದೇಶಿತ ಮಾರ್ಗವೂ ಅಲ್ಲ.

ವಿಚಾರಣಾ ನ್ಯಾಯಾಲಯವು, ಪ್ರತಿವಾದಿಯು ನಿರೂಪಿಸಿದ ವಾದವೂ ಸೇರಿದಂತೆ ಒಟ್ಟಾರೆ ಸಂದರ್ಭಗಳನ್ನು ಗಮನದಲ್ಲಿರಿಸಿಕೊಂಡು ಆಕ್ಷೇಪಣೆಗಳನ್ನು ಕುರಿತು

**ಪರ್ಯಾಲೋಚಿಸಬೇಕಿತ್ತು. ವಿಚಾರಣಾ ನ್ಯಾಯಾಲಯವು ಈ ಸಂಬಂಧದಲ್ಲಿ ಶೋಚನೀಯವಾಗಿ ವಿಫಲವಾಗಿದೆ. ಆ ಮೂಲಕ, ವಿಚಾರಣಾ ನ್ಯಾಯಾಲಯವು, ಪೂರ್ಣಕಾಲಿಕ ವಿಚಾರಣೆ ನಡೆಸಿದ ನಂತರ ವಿಷಯುವನ್ನು ಪರ್ಯಾಲೋಚಿಸಬಹುದಾಗಿತ್ತು. ಯಾಂತ್ರಿಕವಾದ ರೀತಿಯಲ್ಲಿ ಆಕ್ಷೇಪಣೆಗಳನ್ನು ಕುರಿತು ಪರಿಗಣಿಸುವುದು ಮತ್ತು ಸಂಬಂಧಿಸಿದ ಸಂಗತಿಗಳನ್ನು ಮತ್ತು ಸಂದರ್ಭಗಳನ್ನು ಪ್ರತ್ಯೇಕಗೊಳಿಸುವುದು, ನ್ಯಾಯದ ವಿಫಲತೆಯಾಗಿ ಪರಿಣಮಿಸುವುದು. ಸಾಕ್ಷ್ಯವನ್ನು ಮಂಡಿಸಲು ಪಕ್ಷಕಾರರಿಗೆ ಅನುಮತಿ ನೀಡಿದ ನಂತರ ಮತ್ತು ನ್ಯಾಯಾಲಯದ ಮುಂದೆ ಎಲ್ಲ ವಿಷಯಗಳನ್ನು ಮಂಡಿಸಲು ಪಕ್ಷಕಾರರಿಗೆ ಅನುಮತಿ ನೀಡಿದ ನಂತರ ವಿಷಯ ಕುರಿತು ವಿಚಾರಣಾ ನ್ಯಾಯಾಲಯವು ವಿಶದೀಕರಿಸಬಹುದಾಗಿತ್ತು. ಹಾಗಾಗಿ, ಈ ಅವಕಾಶವು, ಮೊಕದ್ದಮೆಯು ಒಳಗೊಂಡಿರುವ ಸಂಗತಿಗಳ ಸ್ಥೂಲ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ವಿಷಯವನ್ನು ಕುರಿತು ಪರ್ಯಾಲೋಚಿಸಲು ನ್ಯಾಯಾಲಯವನ್ನು ಶಕ್ತಗೊಳಿಸುತ್ತಿತ್ತು. ಶಾಸನದ ಹಿನ್ನಲೆಯಲ್ಲಿ ಸಂಗತಿಗಳಿಗೆ ಸಂಬಂಧಿಸಿದ ಅಂಥ ನ್ಯಾಯನಿರ್ಣಯವು, ವಿವಾದಗ್ರಸ್ತ ವಿಷಯದ ಸಂಪೂರ್ಣ ನ್ಯಾಯನಿರ್ಣಯದಲ್ಲಿ ಪರಿಣಮಿಸುತ್ತಿತ್ತು.**

**– ಎಂದು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಯನ್ನು ಅಂಗೀಕರಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. (2001) 3 ಎಸ್‌ಸಿಸಿ 1*
*ಬಿಪಿನ್ ಶಾಂತಿಲಾಲ್ ಪಂಚಾಲ್*
*–ವಿರುದ್ಧ– ಗುಜರಾತ್ ರಾಜ್ಯ ಮತ್ತು ಇನ್ನೊಬ್ಬರು (ಉಲ್ಲೇ) 24*

ಅರ್ಜಿದಾರರ ಪರ : ಶ್ರೀ ವಿ.ಬಿ. ಶಿವಕುಮಾರ್, ನ್ಯಾಯವಾದಿ;
ಸಿ/ಆರ್2–5 ಪ್ರತ್ಯರ್ಜಿದಾರರ ಪರ : ಶ್ರೀ ಜೋಶುವಾ ಹಡ್ಸನ್ ಸ್ಯಾಮುಯಲ್, ನ್ಯಾಯವಾದಿ.

## ಆಜ್ಞೆ

**ನ್ಯಾಯಮೂರ್ತಿ ಜಿ. ನರೇಂದರ್:**

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಮತ್ತು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿ ಇಬ್ಬರ ವಾದವನ್ನು ಆಲಿಸಲಾಯಿತು.

2. ಈ ರಿಟ್ ಅರ್ಜಿಯು ಸಂಕ್ಷಿಪ್ತ ಹರವಿನೊಳಗೆ ಬರುತ್ತದೆ ಮತ್ತು ಈರ್ವರೂ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಸಮ್ಮತಿಯೊಂದಿಗೆ, ವಿಷಯವನ್ನು ಪ್ರಾಥಮಿಕ ಸುನಾವಣೆಯ ಹಂತದಲ್ಲೇ ಅಂತಿಮ ವಿಲೆ ಮಾಡಲು ಕೈಗೆತ್ತಿಕೊಳ್ಳಲಾಗಿದೆ.

3. ಅರ್ಜಿದಾರನು ದಾವೆಯಲ್ಲಿ ಪ್ರತಿವಾದಿಯಾಗಿದ್ದನು ಮತ್ತು ಈ ನ್ಯಾಯಾಲಯದ ಮುಂದೆ, ಪ್ರತಿವಾದಿಯು ಸಾಕ್ಷ್ಯ ನೀಡುವ ಅವಧಿಯಲ್ಲಿ ಹಾಜರುಪಡಿಸಿದ ದಸ್ತಾವೇಜುಗಳನ್ನು ದಾಖಲೆಗೆ ಸೇರಿಸಬಹುದೆಂಬುದರ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯವು ಹೊರಡಿಸಿದ ದಿನಾಂಕ: 22.02.2018ರ ಆದೇಶವನ್ನು ವಿರೋಧಿಸಿ ಈ ನ್ಯಾಯಾಲಯದ ಮುಂದೆ ಬಂದಿದ್ದಾನೆ. ವಿಚಾರಣಾ ನ್ಯಾಯಾಲಯವು, ಸದರಿ ದಸ್ತಾವೇಜುಗಳನ್ನು ತಿರಿಸ್ಕರಿಸಲು ಇಚ್ಛಿಸಿತ್ತು.

4. ಅರ್ಜಿಯ ವಿಲೇವಾರಿಗೆ ಅವಶ್ಯವಿರುವ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

ಶ್ರೀಮತಿ ಗೋದಾಬಾಯಿ, ಕೋಂ: ಶ್ರೀ ಬಿ.ಕೆ. ಗರುಡಾಚಾರ್ ಇವರು, ಕೆಂಗಲ್ ಹನುಮಂತಯ್ಯ ರಸ್ತೆ, ವಿಭಾಗ ಸಂಖ್ಯೆ: 62, ಬೆಂಗಳೂರು ನಗರ ಇಲ್ಲಿ ಇರುವ ಸಂಖ್ಯೆ: 6ನ್ನು (ಪ್ರಸ್ತುತ ಸಂಖ್ಯೆ: 7) ಹೊಂದಿರುವ ಆವರಣದ ಮಾಲೀಕರಾಗಿದ್ದರು. ದಾವೆ ನಿಗದಿಯಾದ ಆವರಣದ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಮತ್ತು ಪ್ರತಿವಾದಿಯು ಬಾಡಿಗೆದಾರನೆಂಬುದರ ಬಗ್ಗೆ ಯಾವುದೇ ವಿವಾದವಿಲ್ಲ.

5. ದಿನಾಂಕ: 26.09.1977ರಂದು, 37 ವರ್ಷ 06 ತಿಂಗಳುಗಳ ಅವಧಿಗೆ ಅರ್ಜಿದಾರನ ಪರವಾಗಿ ಒಂದು ನೋಂದಾಯಿತ ಗುತ್ತಿಗೆ ಪತ್ರವನ್ನು ಬರೆದುಕೊಡಲಾಯಿತು ಮತ್ತು ಈ ಗುತ್ತಿಗೆ ಅವಧಿಯು ದಿನಾಂಕ: 23.03.2015ರಂದು ಕೊನೆಗೊಳ್ಳುತ್ತದೆ ಹಾಗೂ ಗುತ್ತಿಗೆ ಅವಧಿ ಕೊನೆಗೊಂಡ ನಂತರವೂ, ಪ್ರತಿವಾದಿಯು ಆವರಣದ ಅಧಿಭೋಗವನ್ನು ಮುಂದುವರಿಸಿರುವನು. ದಿನಾಂಕ: 26.09.1977ರ ಗುತ್ತಿಗೆ ಪತ್ರದ ನಿಬಂಧನೆಗಳ ಅಭಿಪ್ರಾಯದಲ್ಲಿ, ಪ್ರತಿವಾದಿ–ಅರ್ಜಿದಾರನು, ಇದರ ಮೇಲೆ ಕಟ್ಟಡವನ್ನು ನಿರ್ಮಿಸಿದ್ದಾನೆ ಮತ್ತು ಗುತ್ತಿಗೆ ಅವಧಿ ಪೂರ್ಣಗೊಂಡ ನಂತರ ನಿರ್ಮಿಸಿದ ಆ ನಿರ್ಮಿತಿಯು ನಿರುಪಾಧಿಕವಾಗಿ ಗುತ್ತಿಗೆದಾರನಲ್ಲಿ ನಿಹಿತವಾಗುವುದು.

6. ಗುತ್ತಿಗೆ ಪತ್ರಕ್ಕೆ ಅನುಸಾರವಾಗಿ ಪ್ರತಿವಾದಿಯು ನಿರ್ಮಾಣ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದನು, ಆ ಕೂಡಲೇ ಅದನ್ನು, ದಾವೆಗೆ ಒಳಗಾದ ಆವರಣವು ಸ್ವಾಧೀನ ಅಧಿಸೂಚನೆಯ ವಸ್ತುವಿಷಯವಾಗಿದೆಯೆಂದು ರಾಜ್ಯ ಪ್ರಾಧಿಕಾರಗಳು ಆಕ್ಷೇಪಿಸಿದವು ಮತ್ತು ದಾವೆ ನಿಗದಿಯಾದ ಆವರಣದ ಸ್ವಾಧೀನದ ಕಾರಣದಿಂದ, ನಿರ್ಮಾಣದ ಮುಂದಿನ ಕಾರ್ಯವು ಸ್ಥಗಿತಗೊಂಡಿತು ಮತ್ತು ದಾವೆಗೊಳಗಾದ ಆವರಣವು ವ್ಯಾಜ್ಯದಲ್ಲಿ ಸಿಕ್ಕಿಹಾಕಿಕೊಂಡಿತು ಹಾಗೂ ಈ ಕಾರಣದಿಂದ, ಪ್ರತಿವಾದಿಯು, ಸುಮಾರು $2^1/_2$ ವರ್ಷಗಳಿಗಿಂತ ಹೆಚ್ಚಿನ ಸಾಕಷ್ಟು ಸಮಯವನ್ನು ಕಳೆದುಕೊಂಡಿದ್ದು, ಪಕ್ಷಕಾರರ ಪ್ರಯತ್ನಗಳಿಂದಾಗಿ, ರಾಜ್ಯವು ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಮುಂದಾಗಿರುವುದಿಲ್ಲ.

7. ತತ್ಪರಿಣಾಮದ ವಿಳಂಬದ ಕಾರಣದಿಂದಾಗಿ, ಗುತ್ತಿಗೆದಾರರಾದ ಶ್ರೀಮತಿ ಗೋದಾಬಾಯಿಯವರು, ಗುತ್ತಿಗೆ ಅವಧಿಯನ್ನು ವಿಸ್ತರಿಸಿರುವರೆಂದು ಪ್ರತಿವಾದಿಯು ವಿವರಿಸಿರುವ ದಸ್ತಾವೇಜನ್ನು ಬರೆದುಕೊಟ್ಟಿದ್ದು, ಆ ಮೂಲಕ ಗುತ್ತಿಗೆ ಅವಧಿಯನ್ನು 31.12.2022ರವರೆಗೆ ವಿಸ್ತರಿಸಿದ್ದಾರೆ.

8. ಪಕ್ಷಕಾರರ ಮನವಿಗಳ ಮೇರೆಗೆ, ವಿಚಾರಣಾ ನ್ಯಾಯಾಲಯವು ವಿವಾದಾಂಶವನ್ನು ರೂಪಿಸಿದ್ದು, ವಾದಿಗಳಿಗೆ ಅವರ ಸಾಕ್ಷ್ಯವನ್ನು ಮಂಡಿಸಲು ಅವಕಾಶ ಮಾಡಿಕೊಟ್ಟಿದೆ. ಆ ತರುವಾಯ, ಪ್ರ.ಸಾ.–1 ಇವರನ್ನು ಪರೀಕ್ಷಿಸುವ ಸಮಯದಲ್ಲಿ, ದಿನಾಂಕ: 31.12.1979ರ ಗುತ್ತಿಗೆ ಒಪ್ಪಂದದ ಪ್ರತಿಯನ್ನು ಮತ್ತು ಪ್ರತಿವಾದಿಗೆ ಬರೆದ ಪತ್ರವನ್ನು ಲಗತ್ತಿಸಿ ಈ ನ್ಯಾಯಾಲಯದಲ್ಲಿ ಒಂದು ಜ್ಞಾಪನ ಪತ್ರ (ಮೆಮೊ)ವನ್ನು ಸಲ್ಲಿಸಲಾಗಿದೆ. ಸದರಿ ದಸ್ತಾವೇಜನ್ನು ಗುರುತಿಸುವುದನ್ನು, ವಾದಿಗಳು ತೀವ್ರವಾಗಿ ವಿರೋಧಿಸಿ, ಆಕ್ಷೇಪಣೆಯನ್ನು ಎತ್ತಿದ್ದಾರೆ, ವಿಚಾರಣಾ ನ್ಯಾಯಾಲಯವು, ಸವಿವರವಾದ ಆದೇಶವನ್ನು ಹೊರಡಿಸಿದೆ ಮತ್ತು ಆ ಮೂಲಕ, ಜ್ಞಾಪನಪತ್ರ (ಮೆಮೊ)ದೊಂದಿಗೆ ಹಾಜರುಪಡಿಸಲು ಕೋರಿದ್ದ ಫೋಟೋಸ್ಟ್ಯಾಟ್ ಪ್ರತಿಯನ್ನು ತಿರಸ್ಕರಿಸಿದೆ. ಈ ಆವರಣಕ್ಕೆ ಸಂಬಂಧಿಸಿದ ಈ ನಿರಾಕರಣೆಗೆ ಕಾರಣ, ದಿನಾಂಕ: 31.12.1979ರ ಗುತ್ತಿಗೆ ಒಪ್ಪಂದವನ್ನು ನೋಂದಾಯಿಸಲಾಗಿಲ್ಲ ಅಥವಾ ಅದಕ್ಕೆ ಸಾಕಷ್ಟು ಸ್ಟಾಂಪ್‌ಗಳನ್ನು ಲಗತ್ತಿಸಿಲ್ಲ ಎಂಬುದಾಗಿದೆ.

9. ಸದರಿ ದಸ್ತಾವೇಜನ್ನು ಹಾಗೆ ತಿರಸ್ಕರಿಸುವಾಗ, ವಿಚಾರಣಾ ನ್ಯಾಯಾಲಯವು, ಸ್ವತ್ತು ವರ್ಗಾವಣೆ ಅಧಿನಿಯಮದ 107ನೇ ಪ್ರಕರಣ, ನೋಂದಣಿ ಅಧಿನಿಯಮದ 17(1)(ಬಿ), 17(ಡಿ) ಮತ್ತು 49ನೇ ಪ್ರಕರಣಗಳ ಉಪಬಂಧಗಳನ್ನು ನಿರಾಕರಿಸಲು ಉದ್ದೇಶಿಸಿತ್ತು ಹಾಗೂ ಈ ದಸ್ತಾವೇಜುಗಳನ್ನು ಗುರುತಿಸಲು ಅನುಮತಿ ನೀಡಲಾಗುವುದಿಲ್ಲ ಎಂಬ ನಿರ್ಣಯಕ್ಕೆ ಬರಲು, ***ಎಐಆರ್ 2004 ಕಲ್ಕತ್ತ 316***ರಲ್ಲಿ ವರದಿ ಮಾಡಿದ ಮಾನ್ಯ ಕಲ್ಕತ್ತ ಉಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಮತ್ತು ***2004 (1) ಎಸ್‌ಸಿಸಿ ಪುಟ 1, 2015 (16) ಎಸ್‌ಸಿಸಿ 787ರಲ್ಲಿ*** ಮತ್ತು ***2008(8) ಎಸ್‌ಸಿಸಿ 564***ರಲ್ಲಿ ವರದಿ ಮಾಡಿದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಲು ಉದ್ದೇಶಿಸಿತ್ತು.

10. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಹಾಜರುಪಡಿಸಲು ಕೋರಿದ್ದ ದಿನಾಂಕ: 31.12.1979ರ ಒಪ್ಪಂದವು, ಮೂಲ ಪ್ರತಿಯು ಗುತ್ತಿಗೆದಾರನ ಬಳಿ ಇರುವುದರಿಂದ ಫೋಟೋಸ್ಟ್ಯಾಟ್ ಪ್ರತಿಯಾಗಿದೆ ಎಂಬುದು ಸಮ್ಮತವಾದ

ಸಂಗತಿಯಾಗಿದ್ದು, ಸದರಿ ಸಂಗತಿಯು, ಪ್ರತಿವಾದಿಯೊಂದಿಗೆ ವಾಸ್ತವವಾಗಿ ಸಂಪರ್ಕ ಹೊಂದಿದ್ದ ಗುತ್ತಿಗೆದಾರನ ಪತಿಯು ಬರೆದ ಪತ್ರದಿಂದ ರುಜುವಾತಾಗುತ್ತದೆ ಎಂದು ಪಟ್ಟುಬಿಡದೆ ವಾದಿಸಿದ್ದಾರೆ. ಒಪ್ಪಂದದ ಅವಲೋಕನ ಮಾತ್ರದಿಂದ, ಅದು ಗುತ್ತಿಗೆಯ ವಿಸ್ತರಣೆ ಮಾತ್ರವಾಗಿದ್ದು, ಕಡ್ಡಾಯವಾಗಿ ನೋಂದಾಯಿಸಬಹುದಾದ ದಸ್ತಾವೇಜಾಗಿ ಅದನ್ನು ನಿರೂಪಿಸಲಾಗಿದ್ದು, ಗುತ್ತಿಗೆಯ ನವೀಕರಣವಲ್ಲ ಎಂಬುದು ಕಂಡುಬರುತ್ತದೆ ಎಂದು ಅವರು ವಾದಿಸಿದ್ದಾರೆ. ಅಲ್ಲದೆ ಅವರು, ವಿಚಾರಣಾ ನ್ಯಾಯಾಲಯವು, ಸ್ವತ್ತು ವರ್ಗಾವಣೆ ಅಧಿನಿಯಮದ 107ನೇ ಪ್ರಕರಣದ ವ್ಯಾಪ್ತಿಯನ್ನು ಗ್ರಹಿಸಲು ವಿಫಲವಾಗಿದೆ ಮತ್ತು ನೋಂದಣಿ ಇಲ್ಲದೆ ಇರುವಲ್ಲಿ, ಸದರಿ ದಸ್ತಾವೇಜನ್ನು ಸಾಕ್ಷ್ಯವಾಗಿ ಗುರುತಿಸಲು ಮತ್ತು ಮಂಡಿಸಲು ಅನುಮತಿ ನೀಡಲಾಗುವುದಿಲ್ಲ ಎಂಬ ವಿಚಾರಣಾ ನ್ಯಾಯಾಲಯದ ನಿರ್ಣಯವು ದೋಷಪೂರ್ಣವಾಗಿದೆ ಎಂದು ವಾದಿಸಿದ್ದರೆ. ಅಲ್ಲದೆ ಅವರು, ಇದರಲ್ಲಿನ ವಾದಿಗಳು–ಪ್ರತಿವಾದಿಗಳು ಅವಲಂಬಿಸಿರುವ ವಿವಿಧ ನಿರ್ಣಯಗಳಲ್ಲಿ, ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ತತ್ವಗಳು, ಈ ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳಿಗೆ ಅನ್ವಯವಾಗುವುದಿಲ್ಲವೆಂದು ವಾದಿಸಿದ್ದಾರೆ.

11. ಇದಕ್ಕೆ ತದ್ವಿರುದ್ಧವಾಗಿ, ಪ್ರತಿವಾದಿಗಳ–ವಾದಿಗಳ ಪರ ಮಾನ್ಯ ನ್ಯಾಯವಾದಿಗಳು, ವಿಚಾರಣಾ ನ್ಯಾಯಾಲಯವು ನಿರೂಪಿಸಿದ ನಿರ್ಣಯಗಳನ್ನು ಪುನರುಚ್ಚರಿಸಲು ಪ್ರಯತ್ನಿಸಿದ್ದಾರೆ ಹಾಗೂ ವಿಚಾರಣಾ ನ್ಯಾಯಾಲಯವು ತೆಗೆದುಕೊಂಡ ತೀರ್ಮಾನಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ವಿಚಾರಣಾ ನ್ಯಾಯಾಲಯವು, ನೋಂದಾಯಿತ ಒಪ್ಪಂದದ ನಿಬಂಧನೆಗಳ ಬದಲಾವಣೆ/ಮಾರ್ಪಾಡಿಗೆ ಕಾರಣವಾಗುವ ದಿನಾಂಕ: 31.12.1979ರ ಉದ್ದೇಶಿತ ಒಪ್ಪಂದವನ್ನು ಹಾಜರುಪಡಿಸಬೇಕೆಂದು ಕೋರಿರುವುದಕ್ಕೆ ಹಾಗೂ ನೋಂದಾಯಿತ ದಸ್ತಾವೇಜಿನ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಲಿಖಿತ ದಸ್ತಾವೇಜಿನ ಮೂಲಕ ಮಾತ್ರವೇ ಮಾರ್ಪಡಿಸಬಹುದು ಅಥವಾ ಬದಲಾಯಿಸಬಹುದು ಎಂದು ಹಾಗೂ ಸಾಕ್ಷ್ಯ ಅಧಿನಿಯಮದ 92ನೇ ಪ್ರಕರಣದ ಮೇರೆಗೆ ನಿರ್ಬಂಧವಿರುವುದರಿಂದ ಮೌಖಿಕ ಸಾಕ್ಷ್ಯವನ್ನು

ಅವಲಂಬಿಸಲಾಗದು ಅಥವಾ ಅವಕಾಶ ಮಾಡಿಕೊಡಲಾಗದೆಂದು ಅವರು ನಿವೇದಿಸಿಕೊಳ್ಳಬಹುದಾಗಿತ್ತು ಎಂದು ನೀಡಿರುವ ಆದೇಶವು ಯಾವುದೇ ಹಸ್ತಕ್ಷೇಪವನ್ನು ಬಯಸುವುದಿಲ್ಲವೆಂದು ನಿವೇದಿಸಿದ್ದಾರೆ. ಸದರಿ ವಾದಕ್ಕೆ ಆಧಾರವಾಗಿ 2000(7) ಎಸ್‌ಸಿಸಿ 104ರಲ್ಲಿ ವರದಿ ಮಾಡಿದ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಬಹುದಾಗಿತ್ತು.

12. ಮೇಲಿನ ವಾದಗಳ ಹಿನ್ನಲೆಯಲ್ಲಿ, ಈ ನ್ಯಾಯಾಲಯವು ಪರಿಗಣಿಸಬೇಕಾಗಿರುವ ಅಂಶಗಳೆಂದರೆ:

*1. ವಿಚಾರಣೆಯ ಮಧ್ಯಂತರ ಹಂತದಲ್ಲಿ, ವಿಚಾರಣಾ ನ್ಯಾಯಾಲಯವು ದಸ್ತಾವೇಜುಗಳ ಸ್ವೀಕೃತಿಗೆ ಅನುಮತಿ ನೀಡಿದ್ದರ ನಿರ್ಣಯವು ನ್ಯಾಯಸಮ್ಮತವಾಗಿದೆಯೇ?*

*2. ರಿಟ್ ಅರ್ಜಿಯಲ್ಲಿ ಪ್ರಶ್ನಿತ ಆದೇಶವು ಕಾನೂನಿನಲ್ಲಿ ಊರ್ಜಿತವಾಗಿರುವಂಥದ್ದಾಗಿದೆಯೇ?*

– ಎಂಬುದಾಗಿದೆ.

13. ಈ ನ್ಯಾಯಾಲಯವು, ಲಿಖಿತ ಹೇಳಿಕೆಯಲ್ಲಿರುವ ಮತ್ತು ಅರ್ಜಿಯಲ್ಲಿರುವ ವಾದಿಯ ವಾದಪತ್ರಗಳನ್ನು ಹಾಗೂ ಪಕ್ಷಕಾರರು ಅವಲಂಬಿಸಿರುವ ವಿವಿಧ ದಸ್ತಾವೇಜುಗಳು ಮತ್ತು ಪ್ರಶ್ನಿತ ಆದೇಶದಲ್ಲಿ ನಿರೂಪಿಸಿದ ಕಾರಣಗಳನ್ನು ಸ್ವತಃ ಅವಲೋಕಿಸಿದೆ.

14. ಪ್ರಶ್ನಿತ ಆದೇಶದ ಸ್ಥೂಲ ಅವಲೋಕನದ ನಂತರ ಸಹ, ಲಿಖಿತ ಹೇಳಿಕೆಯಲ್ಲಿನ ವಾದಗಳನ್ನು ವಿಚಾರಣಾ ನ್ಯಾಯಾಲಯವು ನಿರಾಕರಿಸಿಲ್ಲವೆಂಬುದು

ಮತ್ತು ದಸ್ತಾವೇಜನ್ನು ಅಂಗೀಕರಿಸುವ ವಿಷಯದ ಪರಿಗಣನೆಯು, ಪ್ರತಿವಾದಿಯು ವಾದಿಸಿರುವ ಸಂಗತಿಗಳಿಗಿಂತ ಬೇರೆಯೇ ಆಗಿರುವುದು ಕಂಡುಬರುತ್ತದೆ.

15. ದಾಖಲೆಯಲ್ಲಿರುವ ವಿಷಯದಿಂದ, ಪ್ರತಿವಾದಿ–ಬಾಡಿಗೆದಾರನು, ಸಾಧ್ಯವಾದಷ್ಟು ಬೇಗನೆ, ಎಂದರೆ – ಇದರಲ್ಲಿನ ವಾದಿಗಳು–ಪ್ರತಿವಾದಿಗಳು ಜಾರಿಗೊಳಿಸಿದ ಕಾನೂನು ನೋಟೀಸಿಗೆ ಉತ್ತರವಾಗಿ, ಅಂಥ ಹಕ್ಕನ್ನು ಮತ್ತು ಅಂಥ ದಸ್ತಾವೇಜನ್ನು ಬರೆದುಕೊಟ್ಟಿರುವುದನ್ನು ದೃಢಪಡಿಸಿದ್ದಾರೆ. ವಾದಿಗಳು ನೀಡಿದ ಕಾನೂನು ನೋಟೀಸಿಗೆ ಪ್ರತಿಕ್ರಿಯೆಯಾಗಿ ನೀಡಿದ ಉತ್ತರದ ಮೂಲಕ, ಗುತ್ತಿಗೆ ಅವಧಿಯು ದಿನಾಂಕ: 31.02.2002ರಂದು ಕೊನೆಗೊಂಡಿದೆಯೇ ಹೊರತು, ದಿನಾಂಕ: 26.03.2015ರಂದು ಅಲ್ಲವೆಂದು ದೃಢಪಡಿಸಿದ್ದಾರೆ. ಪ್ರತಿವಾದಿ ಪರ ನ್ಯಾಯವಾದಿಯು ನೀಡಿದ ದಿನಾಂಕ: 17.06.2015ರ ಪ್ರತ್ಯುತ್ತರದ ನೋಟೀಸಿನಲ್ಲಿ ಸಹ ಸದರಿ ಸಂಗತಿಯನ್ನು ಪುನರುಚ್ಚರಿಸಲಾಗಿದೆ. ಪ್ರತ್ಯುತ್ತರದ ನೋಟೀಸಿನಲ್ಲಿ, ದಿನಾಂಕ: 31.12.1979ರ ಒಪ್ಪಂದದ ವಿವಿಧ ಖಂಡಗಳ ಸವಿವರವಾದ ಉಲ್ಲೇಖವಿದೆ ಮತ್ತು ದಿನಾಂಕ: 31.12.1979ರ ಗುತ್ತಿಗೆ ಒಪ್ಪಂದವನ್ನು ಜಾರಿಗೊಳಿಸಿದ ನಂತರ, ಪಕ್ಷಕಾರರು, ಇದರಲ್ಲಿನ ನಿಬಂಧನೆ ಮತ್ತು ಷರತ್ತುಗಳಿಗೆ, ಬಾಡಿಗೆ ಸಂದಾಯ ಮತ್ತು ಸ್ವೀಕೃತಿಗೆ ಸಂಬಂಧಿಸಿದಂತೆ ಹೆಚ್ಚು ನಿರ್ದಿಷ್ಟವಾಗಿ ನಿಷ್ಠವಾಗಿರಬೇಕೆಂದು ವಸ್ತುತಃ ಪ್ರತಿಪಾದಿಸಲಾಗಿದೆ. ಇದರ ಹೊರತಾಗಿ, ದೃಢಪಡಿಸಿರುವುದನ್ನು ಉಪೇಕ್ಷಿಸಿ, ವಾದಿಗಳು ದಾವೆಯನ್ನು ಹೂಡಿದ್ದಾರೆ ಮತ್ತು ವಿವರವಾದ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸುವ ಮೂಲಕ ಇದರಲ್ಲಿನ ಪ್ರತಿವಾದಿ–ಅರ್ಜಿದಾರರು ಸದರಿ ದಾವೆಯನ್ನು ವಿರೋಧಿಸಿದ್ದಾರೆ.

16. ಲಿಖಿತ ಹೇಳಿಕೆಯಲ್ಲಿ, ದಿನಾಂಕ: 31.12.1979ರ ಒಪ್ಪಂದವನ್ನು ವಾದಿಗಳು ಅಡಗಿಸಿದ್ದು, ಆ ಮೂಲಕ ಗುತ್ತಿಗೆ ಪ್ರಾರಂಭದ ದಿನಾಂಕವನ್ನು ಮತ್ತು ಗುತ್ತಿಗೆ ಮುಕ್ತಾಯದ ಕೊನೆಯ ದಿನಾಂಕವನ್ನು ಬದಲಾಯಿಸಲಾಗಿದೆ ಮತ್ತು ಈ ಗುತ್ತಿಗೆ ದಿನಾಂಕದ ವಿಸ್ತರಣೆಯು ರಾಜ್ಯದ ಬಿಗಿ ಹಿಡಿತದಿಂದ ಆಸ್ತಿಗಳನ್ನು ಉಳಿಸಿಕೊಳ್ಳುವಲ್ಲಿ

ಕಳೆದುಕೊಂಡ ಅಮೂಲ್ಯವಾದ ಸಮಯದ ಕಾರಣದಿಂದ ಆಗಿರುವಂಥದೆಂಬ ಇಬ್ಬರೂ ಪಕ್ಷಕಾರರ ನಿಯಂತ್ರಣವನ್ನು ಮೀರಿರುವ ಸಂಗತಿಯ ಕಾರಣದಿಂದ ಪ್ರಯೋಜನವನ್ನು ವಿಸ್ತರಿಸಲಾಗಿದೆ ಎಂದು ಸಮರ್ಥಿಸಿಕೊಳ್ಳಲಾಗಿದೆ.

17. ದಿನಾಂಕ: 31.12.1979ರ ಒಪ್ಪಂದದ ನಿಬಂಧನೆಗಳಿಗನುಸಾರವಾಗಿ ಪಕ್ಷಕಾರರು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಪ್ರಾರಂಭದ ದಿನಾಂಕ ಮತ್ತು ಬಾಡಿಗೆಯ ಪ್ರಮಾಣ ಮತ್ತು ಸಂದಾಯದ ವಿಷಯದಲ್ಲಿ ಅದೇ ರೀತಿಯ ಬದಲಾವಣೆಯಾಗಿದೆ ಎಂದು ವಾದಿಸಿದ್ದಾರೆ. ಆದ್ದರಿಂದ, ತರುವಾಯದ ದಸ್ತಾವೇಜುಗಳಲ್ಲಿ, ಬಾಡಿಗೆ ಸ್ವೀಕರಿಸುವ ವಿಷಯದಲ್ಲಿ ಪಕ್ಷಕಾರರು ಪ್ರಜ್ಞಾಪೂರ್ವಕವಾಗಿಯೇ ಕಾರ್ಯನಿರ್ವಹಿಸಿದ್ದಾರೆ ಮತ್ತು ಬಾಡಿಗೆಯನ್ನು ದಿನಾಂಕ: 31.12.1979ರಂದು ಒಪ್ಪಂದದ ನಿಬಂಧನೆಗಳನುಸಾರ ಸಂದಾಯ ಮಾಡಲಾಗಿತ್ತು ಎಂದು ವಾದಿಸಿದ್ದಾರೆ. ಗುತ್ತಿಗೆದಾರರ ಪತಿ ಬಿ.ಕೆ. ಗರುಡಾಚಾರ್ ಎಂಬುವವರಿಗೆ ಬರೆದ ದಿನಾಂಕ: 11.01.1980ರ ಪತ್ರದಲ್ಲಿ ಸಹ ಅದಕ್ಕೆ ಸಂಬಂಧಿಸಿದ ಉಲ್ಲೇಖವನ್ನು ಮಾಡಲಾಗಿದೆ ಹಾಗೂ ಸದರಿ ಪತ್ರಕ್ಕೆ ಗುತ್ತಿಗೆದಾರರು ಸಹ ಮೇಲು ರುಜು ಮಾಡಿದ್ದಾರೆಂದು ಕ್ಲೇಮು ಮಾಡಲಾಗಿದೆ ಎಂದು ವಾದಿಸಿದ್ದಾರೆ.

18. ಪ್ರತಿವಾದಿಯು ಸಮರ್ಥಿಸಿಕೊಂಡಿರುವ ಸಂಗತಿಗಳ ಸಾರಾಂಶದ ಆಧಾರದ ಮೇಲೆ, ಮೊದಲ ನೋಟಕ್ಕೆ, ಪ್ರತಿವಾದಿಯು ಹೊಸದಾದ ಮೊಕದ್ದಮೆಯನ್ನು ಮಂಡಿಸಿದ್ದಾನೆ ಎಂದು ಕಂಡುಬರುತ್ತದೆ. ವಾಸ್ತವವಾಗಿ, ದಿನಾಂಕ: 26.09.1977ರ ನೋಂದಾಯಿತ ಗುತ್ತಿಗೆ ಪತ್ರದ ನಿಬಂಧನೆಗಳಿಗೆ ಮತ್ತು ದಿನಾಂಕ: 31.12.1979ರ ಒಪ್ಪಂದದ ನಿಬಂಧನೆ ಮತ್ತು ಷರತ್ತುಗಳ ಅನುಪಾಲನೆಗೆ ವಿರುದ್ಧವಾಗಿ ಪಕ್ಷಕಾರರು ನಡೆದುಕೊಂಡಿದ್ದಾರೆ ಎಂದು ವಾದಿಸಲಾಗಿದೆ. ಅದು ಏನೇ ಆಗಿರಲಿ, ಇದು ಒಂದು ಮೊಕದ್ದಮೆಯಾಗಿದ್ದು, ಅದನ್ನು ವಿಚಾರಣಾ ನ್ಯಾಯಾಲಯದ ಮುಂದೆ ಮಂಡಿಸಿರುವುದಿಲ್ಲ ಅಥವಾ ಈ ನ್ಯಾಯಾಲಯವು ಸದರಿ ವಿವಾದವನ್ನು ನಿರ್ಣಯಿಸಿರುವುದಿಲ್ಲ.

19. ವಿಚಾರಣಾ ನ್ಯಾಯಾಲಯವು, ಉತ್ತರ ನೀಡಿದ ಪತ್ರಗಳಲ್ಲಾಗಲಿ ಅಥವಾ ಕಾನೂನು ನೋಟೀಸಿನ ಉತ್ತರದಲ್ಲಾಗಲಿ ಅಥವಾ ಲಿಖಿತ ಹೇಳಿಕೆಯಲ್ಲಾಗಲಿ ನಿರೂಪಿಸಿದ ವಾದಗಳನ್ನು ನಿರಾಕರಿಸಿಯೇ ಇಲ್ಲ ಎಂಬುದು ಪ್ರಶ್ನಿತ ಆದೇಶವನ್ನು ಓದುವುದರಿಂದಲೇ ಕಂಡುಬರುತ್ತದೆ. ಇದಲ್ಲದೆ, ವಾದಗಳ ನಿಕಟ ಪರಿಶೀಲನೆಯಿಂದ, ಪ್ರತಿವಾದಿಯು ಕೆಲವು ವಾಸ್ತವಿಕ ಸಂಗತಿಗಳನ್ನು ಕುರಿತು ವಾದಿಸಿದ್ದಾರೆಂದು, ದಸ್ತಾವೇಜುಗಳ ಅಂಗೀಕಾರಾರ್ಹತೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳ ಬಗ್ಗೆ ನಿರ್ಧರಿಸುವಾಗ, ವಿಚಾರಣಾ ನ್ಯಾಯಾಲಯವು ಈ ವಾಸ್ತವಿಕ ಸಂಗತಿಗಳನ್ನು ನಿರಾಕರಿಸಿರುವುದಿಲ್ಲ ಅಥವಾ ಅವುಗಳನ್ನು ಪರಿಗಣಿಸಿರುವುದಿಲ್ಲ ಎಂಬುದು ಕಂಡುಬರುತ್ತದೆ. ಅರ್ಜಿದಾರ–ಪ್ರತಿವಾದಿಯು, ಎರಡನೇ ಸಾಕ್ಷ್ಯದ ಮೂಲಕ ಅದನ್ನು ದಾಖಲೆಯಲ್ಲಿ ತರಲು ಕಾನೂನಿನ ಪ್ರಕಾರ ಹಕ್ಕುಳ್ಳವರಾಗಿರಬಹುದು ಎಂಬುದು ಸಹ ಕಂಡುಬರುತ್ತದೆ.

20. ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯದಲ್ಲಿ, ವಿಚಾರಣಾ ನ್ಯಾಯಾಲಯವು ಪ್ರತ್ಯೇಕವಾಗಿ ಸಂಗತಿಗಳ ಆಕ್ಷೇಪಣೆಗಳನ್ನು ನಿರ್ಧರಿಸುವಲ್ಲಿ ಮತ್ತು ವಿಚಾರಣೆಯನ್ನು ಅವಲಂಬಿಸದೆ ವಿವಾದ ಕುರಿತು ನಿರ್ಣಯಗಳನ್ನು ನೀಡುವಲ್ಲಿ ತಪ್ಪೆಸಗಿದೆ. ದಸ್ತಾವೇಜುಗಳ ಒಳಾಂಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಪ್ರತಿವಾದಿಯು ಆರೋಪಿಸಿದಂತೆ, ಪಕ್ಷಕಾರರ ನಡತೆಗೆ ಸಂಬಂಧಿಸಿದಂತೆ ಅದು ಹೆಚ್ಚು ವಿವರವಾಗಿ ಕಾರ್ಯನಿರ್ವಹಿಸಬೇಕಾಗಿತ್ತು ಹಾಗೂ ಕಾನೂನಿಗೆ ಗೊತ್ತಿರುವ ರೀತಿಯಲ್ಲಿ ಸಾಕ್ಷ್ಯವನ್ನು ನೀಡಲು ಪಕ್ಷಕಾರರಿಗೆ ಅನುಮತಿ ನೀಡಿದ್ದರೆ ಮಾತ್ರ ಇದು ಸಾಧ್ಯವಾಗುತ್ತಿತ್ತು. ಎದ್ದುಕಾಣುವಂತೆಯೇ, ವಿಚಾರಣಾ ನ್ಯಾಯಾಲಯವು, ಮೂಲ ತತ್ವಗಳನ್ನಾಧರಿಸಿ ವಿಷಯವನ್ನು ನಿರ್ಣಯಿಸುವ ಕಾರ್ಯವನ್ನು ಕೈಗೆತ್ತಿಕೊಂಡ ಮಾರ್ಗವನ್ನು ಒಪ್ಪಲಾಗುವುದಿಲ್ಲ. ಈ ವಿಷಯವು, ವಿಚಾರಣಾ ನ್ಯಾಯಾಲಯವು ವಿವೇಚಿಸದೆ ಇರುವ ಸಂಗತಿಗಳ ನಿರ್ಣಯವನ್ನು ಒಳಗೊಂಡಿದೆ.

21. ವಿಚಾರಣಾ ನ್ಯಾಯಾಲಯವು ಅವಲಂಬಿಸಿದ ಮತ್ತು ಈ ನ್ಯಾಯಾಲಯದ ಮುಂದಿರುವ ತೀರ್ಪುಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟವಾಗಿ

ನಿರೂಪಿಸಿದ ಮೊದಲ ತತ್ವಗಳೊಂದಿಗೆ ಯಾವುದೇ ಭಿನ್ನಾಭಿಪ್ರಾಯವಿರುವುದಿಲ್ಲ ಎಂಬುದನ್ನು ಹೇಳುವುದು ಅತ್ಯಗತ್ಯ. ವಿಚಾರಣಾ ನ್ಯಾಯಾಲಯವು ಸ್ವತಃ ಪರಿಹರಿಸಲು ವಿಫಲವಾಗಿರುವ ನಿರ್ಣಾಯಕ ಸಂಗತಿ ಎಂದರೆ, ಸದರಿ ತೀರ್ಪುಗಳು ಪ್ರಸ್ತುತ ಸಂದರ್ಭದ ಸಂಗತಿಗಳಿಗೆ ಮತ್ತು ಸಂದರ್ಭಗಳಿಗೆ ಅನ್ವಯವಾಗುವವೇ ಎಂಬುದಾಗಿದೆ. ವಿಚಾರಣಾ ನ್ಯಾಯಾಲಯವು, ವಾದಗಳ ಜೊತೆಯಲ್ಲಿ ಓದಿದ ದಸ್ತಾವೇಜುಗಳ ಒಳಾಂಶಗಳನ್ನು ವಿಶದಪಡಿಸದೆ ಯಾಂತ್ರಿಕವಾದ ರೀತಿಯಲ್ಲಿ ವಿಷಯವನ್ನು ಪರೀಕ್ಷಿಸಿದೆ. ದಸ್ತಾವೇಜುಗಳ ಒಳಾಂಶಗಳನ್ನು, ಪಕ್ಷಕಾರರು ನಿರೂಪಿಸಿದ ವಾದಗಳ ಮತ್ತು ಅವರ ನಡತೆ ಹಾಗೂ ಈ ಸಂಬಂಧದ ಕಾನೂನಿನ ಹಿನ್ನಲೆಯಲ್ಲಿ ಪರೀಕ್ಷಿಸಬೇಕಿತ್ತು. ಮೊದಲಿನಿಂದಲೇ, ಪ್ರತಿವಾದಿಯು, ದಿನಾಂಕ: 31.12.1979ರ ಒಪ್ಪಂದಕ್ಕೆ ಸಂಬಂಧಿಸಿದಂತೆ ನಿರಂತರವಾಗಿ ವಾದಿಸುತ್ತಾ ಬಂದಿದ್ದಾರೆ.

22. ಇದನ್ನು ವಿಶೇಷವಾಗಿ ಗುತ್ತಿಗೆ ಪಡೆದವರು ವಾದಿಸಿದ್ದರೂ, ದಿನಾಂಕ: 31.12.1979ರ ಒಪ್ಪಂದದ ನಿಬಂಧನೆಗಳ ಅನುಸಾರ ಬಾಡಿಗೆಗಳನ್ನು ಸಂದಾಯ ಮಾಡಲಾಗುತ್ತಿದೆ, ಅವರು ಈ ಸಂಗತಿಯ ಬಗ್ಗೆ ಇಲ್ಲಿ ಪರಿಗಣಿಸುವುದಿರಲಿ, ಚಕಾರ ಕೂಡ ಎತ್ತಿಲ್ಲ. ಆಕ್ಷೇಪಣೆಗಳನ್ನು ಕುರಿತು ಪರ್ಯಾಲೋಚಿಸಲಾಗಿದೆ ಮತ್ತು ಅದನ್ನು ಅತ್ಯಂತ ಯಾಂತ್ರಿಕವಾದ ರೀತಿಯಲ್ಲಿ ಪರ್ಯಾಲೋಚಿಸಲಾಗಿದೆ. ನ್ಯಾಯಾಲಯದ ಅಭಿಪ್ರಾಯದಲ್ಲಿ, ಇದು ನ್ಯಾಯಿಕ ಮಾರ್ಗವಲ್ಲ ಅಥವಾ ಇದು ನ್ಯಾಯೋದ್ದೇಶಿತ ಮಾರ್ಗವೂ ಅಲ್ಲ.

23. ವಿಚಾರಣಾ ನ್ಯಾಯಾಲಯವು, ಪ್ರತಿವಾದಿಯು ನಿರೂಪಿಸಿದ ವಾದವೂ ಸೇರಿದಂತೆ ಒಟ್ಟಾರೆ ಸಂದರ್ಭಗಳನ್ನು ಗಮನದಲ್ಲಿರಿಸಿಕೊಂಡು ಆಕ್ಷೇಪಣೆಗಳನ್ನು ಕುರಿತು ಪರ್ಯಾಲೋಚಿಸಬೇಕಿತ್ತು. ವಿಚಾರಣಾ ನ್ಯಾಯಾಲಯವು ಈ ಸಂಬಂಧದಲ್ಲಿ ಶೋಚನೀಯವಾಗಿ ವಿಫಲವಾಗಿದೆ. ಆ ಮೂಲಕ, ವಿಚಾರಣಾ ನ್ಯಾಯಾಲಯವು, ಪೂರ್ಣಕಾಲಿಕ ವಿಚಾರಣೆ ನಡೆಸಿದ ನಂತರ ವಿಷಯವನ್ನು ಪರ್ಯಾಲೋಚಿಸಬಹುದಾಗಿತ್ತು. ಯಾಂತ್ರಿಕವಾದ ರೀತಿಯಲ್ಲಿ ಆಕ್ಷೇಪಣೆಗಳನ್ನು ಕುರಿತು

ಪರಿಗಣಿಸುವುದು ಮತ್ತು ಸಂಬಂಧಿಸಿದ ಸಂಗತಿಗಳನ್ನು ಮತ್ತು ಸಂದರ್ಭಗಳನ್ನು ಪ್ರತ್ಯೇಕಗೊಳಿಸುವುದು, ನ್ಯಾಯದ ವಿಫಲತೆಯಾಗಿ ಪರಿಣಮಿಸುವುದು. ಸಾಕ್ಷ್ಯವನ್ನು ಮಂಡಿಸಲು ಪಕ್ಷಕಾರರಿಗೆ ಅನುಮತಿ ನೀಡಿದ ನಂತರ ಮತ್ತು ನ್ಯಾಯಾಲಯದ ಮುಂದೆ ಎಲ್ಲ ವಿಷಯಗಳನ್ನು ಮಂಡಿಸಲು ಪಕ್ಷಕಾರರಿಗೆ ಅನುಮತಿ ನೀಡಿದ ನಂತರ ವಿಷಯ ಕುರಿತು ವಿಚಾರಣಾ ನ್ಯಾಯಾಲಯವು ವಿಶದೀಕರಿಸಬಹುದಾಗಿತ್ತು. ಹಾಗಾಗಿ, ಈ ಅವಕಾಶವು, ಮೊಕದ್ದಮೆಯು ಒಳಗೊಂಡಿರುವ ಸಂಗತಿಗಳ ಸ್ಥೂಲ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ವಿಷಯವನ್ನು ಕುರಿತು ಪರ್ಯಾಲೋಚಿಸಲು ನ್ಯಾಯಾಲಯವನ್ನು ಶಕ್ತಗೊಳಿಸುತ್ತಿತ್ತು. ಶಾಸನದ ಹಿನ್ನಲೆಯಲ್ಲಿ ಸಂಗತಿಗಳಿಗೆ ಸಂಬಂಧಿಸಿದ ಅಂಥ ನ್ಯಾಯನಿರ್ಣಯವು, ವಿವಾದಗ್ರಸ್ತ ವಿಷಯದ ಸಂಪೂರ್ಣ ನ್ಯಾಯನಿರ್ಣಯದಲ್ಲಿ ಪರಿಣಮಿಸುತ್ತಿತ್ತು.

24. ಇದಲ್ಲದೆ, ವಿಚಾರಣಾ ನ್ಯಾಯಾಲಯದ ಕ್ರಮವು, ವರದಿ ಮಾಡಿರುವ ***ಬಿಪಿನ್ ಶಾಂತಿಲಾಲ್ ಪಂಚಾಲ್ –ವಿರುದ್ಧ– ಗುಜರಾತ್ ರಾಜ್ಯ ಮತ್ತು ಇನ್ನೊಬ್ಬರು*** [1] ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿಗೆ ಸಹ ವಿರುದ್ಧವಾಗಿದ್ದು, ಅದರಲ್ಲಿ, ಇಂಥಹುವೇ ಸಂದರ್ಭಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠವು, ದಸ್ತಾವೇಜುಗಳನ್ನು ಸ್ವೀಕರಿಸುವ ಸಂಬಂಧದಲ್ಲಿ ಆಕ್ಷೇಪಣೆಗಳನ್ನು ಕುರಿತು ವಿಚಾರಣಾ ನ್ಯಾಯಾಲಯವು ಪರ್ಯಾಲೋಚಿಸುವಾಗ, ಅಂಥ ಆಕ್ಷೇಪಣೆಗಳನ್ನು ಎತ್ತಿಹಿಡಿಯಲಾಗಲಿ ಅಥವಾ ತಳ್ಳಿಹಾಕಲಾಗಲಿ ವಿವರವಾದ ಆದೇಶವನ್ನು ಹೊರಡಿಸುವುದನ್ನು ಆಶ್ರಯಿಸಬೇಕಿರಲಿಲ್ಲ. ವಾಸ್ತವದಲ್ಲಿ, ದಾವೆಯ ವಿವಾದಾಂಶಗಳು, ವಿವಾದಗಳು, ಇತ್ಯರ್ಥದಲ್ಲಿರುವ ವಿಲೆಯ ಪರಿಗಣನೆಯು, ಬಾಧಿತ ಪಕ್ಷಕಾರನು ತನ್ನ ಕುಂದು–ಕೊರತೆಯನ್ನು ಪ್ರಶ್ನಿಸಲು ಮತ್ತು ವಾದಾಕಾಲೀನ ಹಂತದಲ್ಲಿ ಪರಿಹಾರ ಕೋರಲು ಉನ್ನತ ನ್ಯಾಯಾಲಯವನ್ನು ಸಂಪರ್ಕಿಸುವುದರಿಂದ ಮತ್ತು ಆ ಮೂಲಕ ಅದು, ವಿಚಾರಣಾ ನ್ಯಾಯಾಲಯದ ಮುಂದಿನ ವ್ಯವಹರಣೆಗಳ

1. (2001) 3 ಎಸ್‌ಸಿಸಿ 1

ನ್ಯಾಯ ನಿರ್ಣಯದಲ್ಲಿ ಅತಿಯಾದ ವಿಳಂಬವಾಗಿ ಖಂಡಿತವಾಗಿಯು ಪರಿಣಮಿಸುತ್ತದೆಯಾದ್ದರಿಂದ. ಅಂಥ ಮಾರ್ಗವನ್ನು ವ್ಯವಹರಣೆಗಳ ಬಾಹುಳ್ಯದಲ್ಲಿ ಮತ್ತು ವ್ಯವಹರಣೆಗಳನ್ನು ಮುಂದೂಡುವುದರಲ್ಲಿ ಪರಿಣಮಿಸುವ ಹಳೆಯ ಪದ್ಧತಿ ಎಂದು ವರ್ಗೀಕರಿಸಲಾಗಿದೆ. ಈ ಸಂಬಂಧದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, 13ನೇ ಮತ್ತು 16ನೇ ಕಂಡಿಕೆಗಳಲ್ಲಿ ಈ ಮುಂದಿನಂತೆ ನಿರ್ಣಯಿಸಿದೆ:

> *"13. ಸಾಕ್ಷ್ಯವನ್ನು ಸಂಗ್ರಹಿಸುವ ಹಂತದಲ್ಲಿ, ಸಾಕ್ಷ್ಯದಲ್ಲಿನ ಯಾವುದೇ ವಸ್ತುವಿಷಯಕ್ಕೆ ಅನುಮತಿ ನೀಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಯನ್ನು ಎತ್ತಿದಾಗಲೆಲ್ಲ, ನ್ಯಾಯಾಲಯವು, ಅಂಥ ಆಕ್ಷೇಪಣೆಯನ್ನು ಕುರಿತು ಆದೇಶವನ್ನು ಹೊರಡಿಸದೆ ಮುಂದುವರಿಯುವುದಿಲ್ಲ ಎಂಬುದು ಹಳೆಯ ಪದ್ಧತಿಯಾಗಿದೆ. ಆದರೆ, ಮೇಲಿನ ಪದ್ಧತಿಯನ್ನು ತ್ಯಜಿಸಿಬಿಡುವುದು ಹೀಗಿದೆ: ಒಂದು ಮೊಕದ್ದಮೆಯಲ್ಲಿ ವಿಚಾರಣಾ ನ್ಯಾಯಾಲಯವು ಒಂದು ನಿರ್ದಿಷ್ಟ ಆಕ್ಷೇಪಣೆಯನ್ನು ಎತ್ತಿ ಹಿಡಿದಿದೆ ಮತ್ತು ಸಾಕ್ಷ್ಯದಲ್ಲಿ ವಸ್ತುವಿಷಯವನ್ನು ಅಂಗೀಕರಿಸುವುದನ್ನು ಬಿಟ್ಟುಬಿಟ್ಟಿದೆ ಹಾಗೂ ನಂತರ ವಿಚಾರಣೆಯನ್ನು ಮುಂದುವರೆಸಿ, ಅಂತಿಮವಾಗಿ ಮೊಕದ್ದಮೆಯನ್ನು ವಿಲೆ ಮಾಡಿದೆ ಎಂದಿಟ್ಟುಕೊಂಡಲ್ಲಿ, ಅಪೀಲು ಅಥವಾ ಪುನರೀಕ್ಷಣಾ ನ್ಯಾಯಾಲಯವು ಅದೇ ಪ್ರಶ್ನೆಯನ್ನು ಮರು-ಪರಿಶೀಲಿಸಿದಾಗ, ಅಂಥ ಮೊಕದ್ದಮೆಗಳಲ್ಲಿ ಆ ವಸ್ತುವಿಷಯವನ್ನು ಅಂಗೀಕರಿಸುವ ಕುರಿತು ಭಿನ್ನವಾದ ಅಭಿಪ್ರಾಯವನ್ನು ತೆಗೆದುಕೊಂಡರೆ, ಅಪೀಲು ನ್ಯಾಯಾಲಯವು, ಅಂಥ ಸಾಕ್ಷ್ಯದ ಪ್ರಯೋಜನವನ್ನು ತಪ್ಪಿಸಿದಂತಾಗುತ್ತೆ; ಏಕೆಂದರೆ, ಅದನ್ನು ವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿ ಸೇರಿಸಿರುವುದಿಲ್ಲ. ಅಂಥ ಸಂದರ್ಭದಲ್ಲಿ, ಮೇಲಿನ ನ್ಯಾಯಾಲಯವು, ಆ ಸಾಕ್ಷ್ಯವನ್ನು ದಾಖಲಿಸಲು ಮತ್ತು ನಂತರ ಮೊಕದ್ದೆಮಯನ್ನು ಹೊಸದಾಗಿ ವಿಲೆ ಮಾಡಲು ವಿಚಾರಣಾ*

*ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ಮರಳಿ ಕಳುಹಿಸಬಹುದು. ನಾವುಗಳೇ ಸೃಜಿಸಿದ ಪದ್ಧತಿಗಳಿಂದ ಅನಾವಶ್ಯಕವಾಗಿ ವಿಚಾರಣೆಯನ್ನು ಏಕೆ ಆ ರೀತಿಯಾಗಿ ಮುಂದೂಡಬೇಕು. ದೀರ್ಘ ಅವಧಿಯನ್ನು ಹಾದು ಬರುವ ಮೂಲಕ, ಅಂಥ ಪದ್ಧತಿಗಳು ವಿಚಾರಣಾ ವ್ಯವಹರಣೆಗಳ ತ್ವರಿತ ಮತ್ತು ಶೀಘ್ರ ಪ್ರಗತಿಗೆ ತಡೆಯೊಡ್ಡುವ ಅಡಚಣೆಗಳಾಗಿವೆ ಎಂದು ತಿಳಿದುಬಂದಾಗ, ವಿಚಾರಣಾ ವ್ಯವಹರಣೆಗಳ ವೇಗಕ್ಕೆ ಸಹಾಯಕವಾಗುವ ಉತ್ತಮ ಪರ್ಯಾಯ ಪದ್ಧತಿಗಳಿಗೆ ದಾರಿ ಮಾಡಿಕೊಡಲು, ಅದನ್ನು ಹೊಸದಾಗಿ ರಚಿಸಬೇಕು ಮತ್ತು ಮರು–ರೂಪಿಸಬೇಕು.*

*14. ಹಾಗೆ ಹೊಸದಾಗಿ ರಚಿಸಿದಾಗ, ಉತ್ತಮ ಪರ್ಯಾಯವಾಗುವ ಅಂಥ ಪದ್ಧತಿಯು ಹೀಗಿರುತ್ತದೆ: ಯಾವುದೇ ವಸ್ತುವಿಷಯ ಅಥವಾ ಮೌಖಿಕ ಸಾಕ್ಷ್ಯದ ಅಂಶವನ್ನು ಸೇರಿಸುವುದಕ್ಕೆ ಸಂಬಂಧಿಸಿದಂತೆ ಸಾಕ್ಷ್ಯವನ್ನು ತೆಗೆದುಕೊಳ್ಳುವ ಹಂತದಲ್ಲಿ ಆಕ್ಷೇಪಣೆಯನ್ನು ಎತ್ತಿದಾಗಲೆಲ್ಲ, ವಿಚಾರಣಾ ನ್ಯಾಯಾಲಯವು, ಅಂಥ ಆಕ್ಷೇಪಣೆಯ ಬಗ್ಗೆ ಟಿಪ್ಪಣಿ ಮಾಡಿ, ಅಂತಿಮ ತೀರ್ಪಿನಲ್ಲಿ ಕೊನೆಯ ಹಂತದಲ್ಲಿ ಅಂಥ ಆಕ್ಷೇಪಣೆಗಳ ಬಗ್ಗೆ ನಿರ್ಧರಿಸಬೇಕು ಎಂಬುದಕ್ಕೆ ಒಳಪಟ್ಟು, ಮೊಕದ್ದಮೆಯಲ್ಲಿ ಆಕ್ಷೇಪಿತ ದಸ್ತಾವೇಜನ್ನು ತಾತ್ಕಾಲಿಕವಾಗಿ ನಿಶಾನೆಯಾಗಿ ಗುರುತಿಸಬಹುದು (ಅಥವಾ ಮೌಖಿಕ ಸಾಕ್ಷ್ಯದ ಆಕ್ಷೇಪಿತ ಭಾಗವನ್ನು ದಾಖಲಿಸಬಹುದು). ಅಂತಿಮ ಹಂತದಲ್ಲಿ, ಹಾಗೆ ಎತ್ತಿದ ಆಕ್ಷೇಪಣೆಯು ಸಮರ್ಥನೀಯವೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ನ್ಯಾಯಾಧೀಶರು ಅಥವಾ ಮ್ಯಾಜಿಸ್ಟ್ರೇಟರು, ಅಂಥ ಸಾಕ್ಷ್ಯವನ್ನು ಪರ್ಯಾಲೋಚನೆಯಿಂದ ಹೊರತುಪಡಿಸುವಂತೆ ನೋಡಿಕೊಳ್ಳಬಹುದು. ನಮ್ಮ ಅಭಿಪ್ರಾಯದಲ್ಲಿ, ಅಂಥ ಕ್ರಮವನ್ನು ಅಳವಡಿಸಿಕೊಳ್ಳುವುದರಲ್ಲಿ ಯಾವುದೇ ಕಾನೂನುಬಾಹಿರತೆ ಇರುವುದಿಲ್ಲ. (ಆದಾಗ್ಯೂ, ಆಕ್ಷೇಪಣೆಯು, ದಸ್ತಾವೇಜಿನ ಸ್ಟಾಂಪ್*

ಸುಂಕದ ಕೊರತೆಗೆ ಸಂಬಂಧಿಸಿದ್ದರೆ, ವ್ಯವಹರಣೆಯಲ್ಲಿ ಮುಂದುವರಿಯುವ ಮೊದಲು ಆಕ್ಷೇಪಣೆ ಕುರಿತು ನ್ಯಾಯಾಲಯವು ನಿರ್ಧರಿಸಬೇಕಾಗುತ್ತದೆ ಎಂಬುದನ್ನು ನಾವು ಇಲ್ಲಿ ಸ್ಪಷ್ಟಪಡಿಸುತ್ತೇವೆ. ಉಳಿದ ಎಲ್ಲಾ ಆಕ್ಷೇಪಣೆಗಳಿಗೆ, ಮೇಲೆ ಸಲಹೆ ನೀಡಿದ ಪ್ರಕ್ರಿಯೆಯನ್ನು ಅನುಸರಿಸಬಹುದಾಗಿದೆ).

15. ಮೇಲಿನ ಪ್ರಕ್ರಿಯೆಯನ್ನು ಅನುಸರಿಸಿದರೆ, ಎರಡು ಪ್ರಯೋಜನಗಳಿವೆ. ಮೊದಲನೆಯದು, ಸಾಕ್ಷ್ಯವನ್ನು ತೆಗೆದುಕೊಳ್ಳುವ ಹಂತದಲ್ಲಿ, ಅಂಥ ಆಕ್ಷೇಪಣೆಗಳನ್ನು ಎತ್ತುವ ಕಾರಣದಿಂದ ವಿಚಾರಣಾ ನ್ಯಾಯಾಲಯದ ಸಮಯವು ವ್ಯರ್ಥವಾಗುವುದಿಲ್ಲ ಮತ್ತು ನ್ಯಾಯಾಲಯವು ಸಾಕ್ಷಿದಾರರನ್ನು ಪರೀಕ್ಷಿಸುವ ಪ್ರಕ್ರಿಯೆಯನ್ನು ಮುಂದುವರಿಸಬಹುದು. ದಿನಗಳಾಗಿಲ್ಲದಿದ್ದರೆ, ಸಾಕ್ಷಿದಾರರು ದೀರ್ಘ ಅವಧಿಯವರೆಗೆ ಕಾಯಬೇಕಾದ ಅಗತ್ಯವಿರುವುದಿಲ್ಲ. ಎರಡನೆಯದಾಗಿ, ವಿಚಾರಣಾ ನ್ಯಾಯಾಲಯದ ಅಂತಿಮ ತೀರ್ಪಿನ ವಿರುದ್ಧ ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ, ಅದೇ ಆಕ್ಷೇಪಣೆಯನ್ನು ಪುನಃ ಪ್ರಸ್ತಾವಿಸಿದಾಗ ಮತ್ತು ಮರುಪರಿಶೀಲಿಸಿದಾಗ, ಆ ಆಕ್ಷೇಪಣೆಗೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯವು ತೆಗೆದುಕೊಂಡು ಅಭಿಪ್ರಾಯದ ಸರಿತನವನ್ನು, ಹೊಸದಾಗಿ ವಿಲೆ ಮಾಡಲು ಪುನಃ ವಿಚಾರಣಾ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ಹಿಂದಕ್ಕೆ ಕಳುಹಿಸುವ ತೊಂದರೆ ನೀಡದೆ ವರಿಷ್ಠ ನ್ಯಾಯಾಲಯವೇ ನಿರ್ಧರಿಸಬಹುದು. ಈ ಕ್ರಮವು, ವ್ಯಾಜ್ಯದಲ್ಲಿರುವ ಪಕ್ಷಕಾರರಿಗೆ ಯಾವುದೇ ಬಾಧೆಯನ್ನುಂಟು ಮಾಡುವುದಿಲ್ಲ ಹಾಗೂ ಅವರ ಸಂಕಷ್ಟವನ್ನಾಗಲಿ ಅಥವಾ ವೆಚ್ಚವನ್ನಾಗಲಿ ಹೆಚ್ಚಿಸುವುದಿಲ್ಲ ಎಂಬ ಅಂಶದ ಕಡೆ ಸಹ ನಾವು ಗಮನ ಸೆಳೆಯುತ್ತೇವೆ.

16. ಆದುದರಿಂದ, ನಾವು ಮೇಲಿನ ಕ್ರಮವನ್ನು, ಯಾವುದೇ ವಸ್ತುವಿಷಯವನ್ನು ಅಥವಾ ಮೌಖಿಕ ಸಾಕ್ಷ್ಯದ ಯಾವುದೇ ಅಂಶವನ್ನು

*ಅಂಗೀಕರಿಸುವುದಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಎತ್ತಿದಾಗಲೆಲ್ಲ, ವಿಚಾರಣಾ ನ್ಯಾಯಾಲಯಗಳು ಅನುಸರಿಸಬೇಕಾದ ಪ್ರಕ್ರಿಯೆಯಾಗಿಸಿದ್ದೇವೆ.*

ಮೇಲಿನ ಚರ್ಚೆಯ ಮತ್ತು ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳ ಹಿನ್ನಲೆಯಲ್ಲಿ, ರಿಟ್ ಅರ್ಜಿಗೆ ***ಭಾಗಶಃ ಅನುಮತಿ ನೀಡಲಾಗಿದೆ.*** ಪ್ರಶ್ನಿತ ಆದೇಶವನ್ನು ತಳ್ಳಿಹಾಕಲಾಗಿದೆ. ಮೇಲೆ ಉಲ್ಲೇಖಿಸಿದ ***ಬಿಪಿನ್ ಶಾಂತಿಲಾಲ್ ಪಂಚಾಲ್*** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿದ ಪ್ರಕ್ರಿಯೆಯನ್ನು, ವಿಚಾರಣಾ ನ್ಯಾಯಾಲಯವು ಅಳವಡಿಸಿಕೊಳ್ಳತಕ್ಕದ್ದು. ವಿಚಾರಣಾ ನ್ಯಾಯಾಲಯವು, ಎತ್ತಲಾದ ಆಕ್ಷೇಪಣೆಗೆ ಒಳಪಟ್ಟು ದಸ್ತಾವೇಜುಗಳನ್ನು ಗುರುತು ಮಾಡತಕ್ಕದ್ದು ಮತ್ತು ವಿಚಾರಣೆಯನ್ನು ಮುಂದುವರಿಸತಕ್ಕದ್ದು ಹಾಗೂ ತರುವಾಯದಲ್ಲಿ, ಅಂತಿಮ ತೀರ್ಪನ್ನು ನೀಡುವ ಅಂತಿಮ ಹಂತದಲ್ಲಿ ಆಕ್ಷೇಪಣೆಗಳನ್ನು ಪರಿಗಣಿಸತಕ್ಕದ್ದು.

ರಿಟ್ ಅರ್ಜಿ ಕುರಿತ ಆದೇಶವನ್ನು ತದನುಸಾರವಾಗಿ ನೀಡಲಾಗಿದೆ.